ಅಗ್ರಗಣ್ಯರು ನಾ.ಶ್ರೀ. ರಾಜಪುರೋಹಿತರು.

ಹಾವೇರಿಗೆ ಸುಮಾರು 20 ಮೈಲುಗಳಷ್ಟು ದೂರವಿರುವ ಅಗಡಿ ಗ್ರಾಮದಲ್ಲಿ ನಾರಾಯಣಾಚಾರ್ಯ ಶ್ರೀನಿವಾಸಾಚಾರ್ಯ ರಾಜಪುರೋಹಿತರು 17 ಜುಲೈ 1887ರಂದು 'ರಾಜಪುರೋಹಿತ' ಹೆಸರಿನ ಒಂದು ಬಡ ಮನೆತನದಲ್ಲಿ ಹುಟ್ಟಿದರು. ಅವರ ಆಗಿನ ಜೀವನ, ಶಿಕ್ಷಣದ ಬಗೆಗೆ ಖಚಿತ ಮಾಹಿತಿ ಸಿಗದಿದ್ದರೂ, ಅವರು ಬಹಳ ಬುದ್ಧಿವಂತರಾಗಿದ್ದರು ಹಾಗೂ ಮುಲ್ಕಿ ಪರೀಕ್ಷೆಯಲ್ಲಿ ಅಂದಿನ ಇಡೀ ಅವಿಭಜಿತ ಧಾರವಾಡ ಜಿಲ್ಲೆಗೆ ಪ್ರಥಮರಾಗಿ ಪಾಸಾಗಿದ್ದರು. ತದನಂತರ ಶಿಕ್ಷಕ ವೃತ್ತಿ ಕೈಕೊಳ್ಳಲು ಅವಶ್ಯವಾದ ಮೂರು ವರ್ಷದ ಟ್ರೇನಿಂಗ್, ಕಾಲೇಜಿನಲ್ಲಿ ಅಭ್ಯಸಿಸಿ ಉತ್ತಮ ರೀತಿಯಲ್ಲಿ ಉತ್ತೀರ್ಣರಾದರು. 1905ರಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕರೆಂದು ನೇಮಕಾತಿ ಆಯಿತು. ಅವರು ಧಾರವಾಡಕ್ಕೆ ಬಂದರು. ಅದೇ ವರ್ಷ, ನಂತರದಲ್ಲಿ 'ಕರ್ನಾಟಕ ಕುಲಪುರೋಹಿತ'ರೆಂದೇ ಪ್ರಸಿದ್ಧರಾದ ಆಲೂರು ವೆಂಕಟರಾಯರು ಎಂ.ಎ.; ಎಲ್.ಎಲ್.ಬಿ. ಮುಗಿಸಿ ವಕೀಲಿ ವೃತ್ತಿ ಆರಂಭಿಸಲೆಂದು ಧಾರವಾಡಕ್ಕೆ ತಿರುಗಿಬಂದರು. 1905ರಲ್ಲಿಯೇ ಒಡೆದು ಆಳುವ ನೀತಿಯ ಬ್ರಿಟಿಷ್ ಗವರ್ನರ್ ಬಂಗಾಲ ಪ್ರಾಂತ್ಯವನ್ನು ವಿಭಜಿಸಿದರು. ವಿಭಜನೆಯ ವಿರುದ್ಧ ಬಂಗಾಲಿಗಳು ಪ್ರತಿಕ್ರಿಯೆ ತೋರಿಸಿ ಸಿಡಿದೆದ್ದರು. ಇದೇ ಕಾರಣವಾಗಿ ಬಂಗಾಲಿಗಳು ತಮ್ಮ ಇತಿಹಾಸ, ಸಾಹಿತ್ಯ, ಕಲೆಗಳನ್ನೆಲ್ಲಾ ಹಿಂತಿರುಗಿ ಅಭ್ಯಸಿಸಿ ತಮ್ಮ ಏಕತೆಯನ್ನು, ಶ್ರೇಷ್ಠತೆಯನ್ನು ಎತ್ತಿತೋರಿಸಿ ಮೆರೆದರು. ಈ ವಂಗ-ಭಂಗ ಚಳವಳಿಯ ಪ್ರಭಾವ ಮಹಾರಾಷ್ಟ್ರದ ಮೇಲೆ ಹಾಗೂ ಸಾಕಷ್ಟು ಮಟ್ಟಿಗೆ ಕರ್ನಾಟಕದ ಮೇಲೂ ಆಯಿತು. 1905 ಒಂದು ಐತಿಹಾಸಿಕ ಮಹತ್ವದ ವರ್ಷವಾಯಿತು.

ಕಾಲೇಜು ಶಿಕ್ಷಣಕ್ಕೆ ಮುಂಬಯಿ-ಕರ್ನಾಟಕದ ತರುಣ ಕನ್ನಡ ವಿದ್ಯಾರ್ಥಿಗಳು ಪುಣೆಗೆ ಹೋಗಬೇಕಾಗುತ್ತಿತ್ತು. ಅಂದಿನ ಇತಿಹಾಸದ ಪಠ್ಯಪುಸ್ತಕಗಳಲ್ಲಿ ನಮೂದಿಸಲಾದ ಕನ್ನಡಿಗರ ಇತಿಹಾಸವು ತೀರಾ ನಗಣ್ಯವಾಗಿತ್ತು. ಹೀಗಾಗಿ ಕನ್ನಡ ವಿದ್ಯಾರ್ಥಿಗಳಿಗೆ ತಮ್ಮ ಇತಿಹಾಸ ತಿಳಿಯುತ್ತಿರಲಿಲ್ಲ; ಅವರ ಸಹಪಾಠಿ ಮರಾಠಿ ವಿದ್ಯಾರ್ಥಿಗಳಿಂದ ಆ ಕಾರಣಕ್ಕಾಗಿ ಅವರು ಅಪಮಾನ, ಹೀಯಾಳಿಕೆಗೊಳಗಾಗುತ್ತಿದ್ದರು. ಆಲೂರು ವೆಂಕಟರಾಯರಿಗೂ ಇದು ಅನುಭವಕ್ಕೆ ಬಂದಿತ್ತು. ಬಹುಶಃ ಅವರ ಮನಸ್ಸು ಅದರಿಂದ ಚಿಂತನೆಗೊಳಗಾಗುತ್ತಿದ್ದಿರಬೇಕು. ಧಾರವಾಡಕ್ಕೆ ಬಂದ ಕೆಲವೇ ದಿನಗಳಲ್ಲಿ ಅವರಿಗೆ ಆನೆಗೊಂದಿಗೆ ಹೋಗುವ ಪ್ರಸಂಗ ಬಂತು. ಅಲ್ಲಿಂದ ಹಂಪಿಗೆ ಹೋದ ಅವರಿಗೆ ಅಲ್ಲಿಯ ವಿಜಯನಗರ ಸಾಮ್ರಾಜ್ಯದ ವಿಶಾಲ ವೈಭವ ಪಳೆಯುಳಿಕೆಗಳನ್ನು ಕಂಡು ರೋಮಾಂಚನವಾಯಿತು. ಅವರ ಕಣ್ಣು ತೆರೆದವು. ತಮ್ಮ ಇತಿಹಾಸದ ಬಗ್ಗೆ ಸಂಶೋಧಿಸಿ ತನ್ನ ಜನರಲ್ಲಿ ಜಾಗೃತಿ ಮೂಡಿಸಬೇಕೆಂದು ಹಂಬಲವೂ ಹುಟ್ಟಿಕೊಂಡಿರಬೇಕು. ಹತ್ತು-ಹನ್ನೆರಡು ವರ್ಷಗಳ ಪ್ರಯತ್ನದ ಫಲವಾಗಿ 'ಕರ್ನಾಟಕ ಗತವೈಭವ' ಕೃತಿ ಹೊರಬಂತು.

1908ರಲ್ಲಿ ಆಲೂರ ಅವರು 'ರಾಷ್ಟ್ರೀಯ ವಿದ್ಯಾಲಯ' ಸ್ಥಾಪಿಸಿದರು. ಅದೇ ಸುಮಾರಿಗೆ ತಮಗೆ ನೌಕರಿ ಕೊಟ್ಟ ಬ್ರಿಟಿಷ್ ಸರ್ಕಾರದ ವಿರುದ್ಧ ಬರೆದ ಒಂದು ಪತ್ರದಿಂದಾಗಿ ರಾಜಪುರೋಹಿತರು ನೌಕರಿಯಿಂದ ಕೈತೊಳೆದುಕೊಂಡರು. ಅಲ್ಲಿಂದ ನೆಟ್ಟಗೆ ಆಲೂರು ಅವರಲ್ಲಿಗೆ ಬಂದು, ಅವರ 'ರಾಷ್ಟ್ರೀಯ ವಿದ್ಯಾಲಯ'ವನ್ನು ಶಿಕ್ಷಕರಾಗಿ ಸೇರಿಕೊಂಡರು. ಆಲೂರ ಅವರು ಹಾಗೂ ರಾಜಪುರೋಹಿತರು ಹೀಗೆ ಒಟ್ಟಿಗೆ ಬಂದುದು ಒಂದು ಮಹತ್ವದ ಘಟನೆ. ಅವರಿಬ್ಬರ ನಡುವಿನ ಈ ಸಂಬಂಧ-ಸಹಯೋಗ ಅವರು ಬದುಕಿರುವವರೆಗೂ ಉಳಿದವು. ರಾಜಪುರೋಹಿತರು ಆಲೂರು ಅವರಿಂದ ಪ್ರಭಾವಿತರಾದದ್ದೂ ಹೌದು.

ಪುಣೆಯಲ್ಲಿದ್ದಾಗ ಹಾಗೂ ನಂತರ ಧಾರವಾಡದಲ್ಲಿ ಕೂಡ ಆಲೂರರ ಮೇಲೆ ಲೋಕಮಾನ್ಯರ ಪ್ರಭಾವ ಇದ್ದೇ ಇತ್ತು. ಅದು ಪ್ರಾಮಾಣಿಕ ಕಳಕಳಿಯಾಗಿತ್ತು. ಜೊತೆಜೊತೆಗೆ ಕರ್ನಾಟಕಕ್ಕಾಗಿ ದುಡಿಯಬೇಕೆಂಬ ಅಂತರಂಗದ ಕರೆಯೂ ಬಲವಾಗಿತ್ತು. ಆಲೂರು ಅವರು ಎರಡನೆಯದನ್ನು ಆರಿಸಿಕೊಂಡರು. ಅವರ ಆಯ್ಕೆ ಸರಿಯಾಗಿತ್ತು. ದೇಶಕ್ಕಾಗಿ ಕೆಲಸ ಮಾಡುವವರು ಎಲ್ಲೆಲ್ಲಿಯೂ ಸಿಗಬಹುದು. ಆದರೆ, ಕನ್ನಡಕ್ಕಾಗಿ? ರಾಜಪುರೋಹಿತರೂ ಅದೇ ಸಂದಿಗ್ಧತೆಯನ್ನು ಎದುರಿಸಿ ತಾವೂ ಆಲೂರು ಅವರಂತೆಯೇ ನಿರ್ಣಯ ತೆಗೆದುಕೊಂಡಿದ್ದರು. 'ರಾಷ್ಟ್ರೀಯ ವಿದ್ಯಾಲಯ' ಮುಚ್ಚಿದರೂ ಕೂಡ ರಾಜಪುರೋಹಿತರು ಅಲ್ಲಿಯೇ ಉಳಿದರು, ಸುಮಾರು ಎರಡು ವರ್ಷ. ವರಕವಿ ಬೇಂದ್ರೆಯವರ ಅಜ್ಜಿ